ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-6, May- June 2025, Pp. 1-4
©*IIMRD*, Mysuru
IIMRD JOURNALS
www.iimrd.com

# ಹೊನ್ನನಗರಿಯ ಕಾಳುಮೆಣಸಿನ ರಾಣಿ ಚನ್ನಭೈರಾದೇವಿ (ಸಾಮ್ರಾಜ್ಯಶಾಹಿ ಧೋರಣೆಗಿಂತ ಪ್ರಜಾಪ್ರಿಯತೆ ಹೊಂದಿದವಳು)

**ಡಾ. ಗಜಾನನ ನಾಯ್ಕ**
ಸಹ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**ಸಾರಾಂಶ: (Abstract)**

*ಕರ್ನಾಟಕವನ್ನು ಆಳಿದ ಕಿತ್ತೂರು ಚನ್ನಮ್ಮ, ಸುರಪುರದ ಈಶ್ವರಮ್ಮ, ಬೆಳವಡಿ ಮಲ್ಲಮ್ಮ, ವಂಟಮೂರಿ ನಾಗಮ್ಮ, ರಾಣಿ ಅಬ್ಬಕ್ಕದೇವಿ, ರಾಣಿ ಲಕ್ಷಮ್ಮಣಿ, ಇವರುಗಳಂತೆ ಇಡೀ ಕನ್ನಡ ನಾಡಿನ ಚರಿತ್ರೆಯಲ್ಲಿ ಸುದೀರ್ಘ ಆಡಳಿತ ಮಾಡಿದ ಏಕೈಕ ರಾಣಿ ಕರಾವಳಿಯ ಚನ್ನಭೈರಾದೇವಿ. 1552 ರಿಂದ 1606 ರವರೆಗೆ ಸರಿಸುಮಾರು 54 ವರ್ಷಗಳ ಕಾಲ ಸುದೀರ್ಘವಾಗಿ ಗೇರುಸೊಪ್ಪೆಯ 'ನಗರೆ' ಮತ್ತು ಅಂದಿನ 'ಸಂಗೀತಪುರ'ವಾದ ಇಂದಿನ 'ಹಾಡೊಳ್ಳಿ'ಯನ್ನು ರಾಜಧಾನಿಯನ್ನಾಗಿಸಿಕೊಂಡು ಆಡಳಿತ ನಡೆಸಿದಳು. ಇಷ್ಟು ಸುದೀರ್ಘ ಆಡಳಿತ ನಡೆಸಿದ ಮತ್ತೊಬ್ಬ ರಾಣಿ ಭಾರತ ಅಥವಾ ಪ್ರಪಂಚದಲ್ಲಿಯೇ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಏಕೆಂದರೆ ಇಂಗ್ಲೆಂಡಿನ ರಾಣಿಯಾಗಿದ್ದ ಮೊದಲನೆಯ ಎಲಿಜೆಬೆತ್ ರಾಣಿ ಬ್ರಿಟನ್‌ನಲ್ಲಿ ಆಡಳಿತ ನಡೆಸಿದ್ದು 49 ವರ್ಷಗಳು ಮಾತ್ರ!.*

**ಮುಖ್ಯಪದಗಳು (Keywords):** ಹೊನ್ನನಗರಿ, ಕಾಳುಮೆಣಸಿನ ರಾಣಿ ಚನ್ನಭೈರಾದೇವಿ, ಸಾಮ್ರಾಜ್ಯಶಾಹಿ ಧೋರಣೆ.

**ಪೀಠಿಕೆ**

ರಾಣಿ ಚನ್ನಭೈರಾದೇವಿ ಕುರಿತು ಸ್ಥಳೀಯ ಹಿರಿಯ ತಲೆಮಾರುಗಳಲ್ಲಿ ಒಂದಿಷ್ಟು ಚಾರಿತ್ರಿಕ ವಿವರಗಳಿದ್ದರೂ ಅದು ಸಮಗ್ರವಾಗಿಲ್ಲ. ಈ ಸಮಗ್ರ ಅಥವಾ ಚದುರಿದ ವಿವರಗಳನ್ನು ಒಂದಿಷ್ಟು ಕ್ರೂಢೀಕರಿಸಿ ಕಾದಂಬರಿಕಾರ ಗಜಾನನ ಶರ್ಮ ಅವರು ರಚಿಸಿದ 'ಕರಿಮೆನಸಿನ ರಾಣಿಯ ಅಕಳಂಕ ಚರಿತೆ'. ಇದು ಐತಿಹಾಸಿಕ ಕಾದಂಬರಿಯಾಗಿರುವುದರಿಂದ ಚರಿತ್ರೆಯ ವಿವರಗಳಿಗೆ ವಿಶೇಷಣಗಳೇ ಅತಿಯಾಗಿವೆ. ಇಂದು ನಾವು ಚನ್ನಭೈರಾದೇವಿಯ ಕುರಿತು ತಿಳಿಯಬೇಕೆಂದರೆ ಸಿಗುವ ದಾಖಲೆಯೆಂದರೆ ಗೆರುಸೊಪ್ಪೆ ಮತ್ತು ಹಾಡೊಳ್ಳಿಯಲ್ಲಿ ಸಿಕ್ಕಿರುವ ಒಂದೆರಡು ಶಾಸನಗಳು, ಕೆಳದಿ ನೃಪವಿಜಯದ ಕೆಲ ಭಾಗದಲ್ಲಿ ಬರುವ ವಿವರ, ಸೂರ್ಯನಾಥರಾವ, ಭಟ್ಟಸೂರಿ, ಬಿ. ಎಸ್. ಶಾಸ್ತ್ರೀ. ರಘುನಾಥಭಟ್ಟ ಇವರುಗಳು ಶಾಸನ ಸಾಹಿತ್ಯದ ಹಿನ್ನೆಲೆಯಲ್ಲಿ ಬರೆದ ಕೆಲವು ಲೇಖನಗಳು, ಕಮಲಾ ಹಂಪನ ಅವರ 'ಜೈನ

*Please cite this article as:* ಗಜಾನನ ನಾಯ್ಕ. (2025). ಹೊನ್ನನಗರಿಯ ಕಾಳುಮೆಣಸಿನ ರಾಣಿ ಚನ್ನಭೈರಾದೇವಿ (ಸಾಮ್ರಾಜ್ಯಶಾಹಿ ಧೋರಣೆಗಿಂತ ಪ್ರಜಾಪ್ರಿಯತೆ ಹೊಂದಿದವಳು). ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(6). ಪು.ಸಂ.* 1–4

ರಾಣಿಯರು ಕೃತಿ', ಕೆ. ಎನ್. ಗಣೇಶಯ್ಯನವರ 'ಬೆಳ್ಳಿ ಕಾಳ ಬೆಳ್ಳಿ' ಕಾದಂಬರಿ ಮತ್ತು ಸಾಳ್ವ ಮನೆತನದ ಕುರಿತಿರುವ ಐತಿಹ್ಯ, ದಂತಕಥೆ, ಜನಪದ ವಿವರಗಳು ಮಾತ್ರ. ಇವುಗಳನ್ನು ಹೊರತುಪಡಿಸಿದರೆ, ಪೋರ್ಚುಗೀಸ್ ಆಡಳಿತದ ದಾಖಲೆಗಳಾಗಿವೆ.

ವಿಜಯನಗರದ ಸಾಳ್ವ ಅರಸರು ಹದಿನೇಳನೇ ಶತಮಾನದಲ್ಲಿ ಗೇರುಸೊಪ್ಪೆ ಮತ್ತು ಹಾಡೊಳ್ಳಿಗಳನ್ನು ಆಳುತ್ತಿದ್ದರು. ಕಾಲಾಂತರದಲ್ಲಿ ಗೇರುಸೊಪ್ಪೆಯ ಅರಸ ಇಮ್ಮನ್ನಿ ದೇವರಾಯ ವಿಜಯನಗರ ಅರಸರ ಹೆಸರಿನಲ್ಲಿ 1515 ರಿಂದ ರಾಜನಾಗಿ ಆಡಳಿತ ನಡೆಸುತ್ತಿದ್ದ. ಕೆಲವು ವರ್ಷಗಳ ತರುವಾಯ ಪೋರ್ಚುಗೀಸ್‌ರ ಸೇನೆ 1542 ರಲ್ಲಿ ನಡೆದ ಯುದ್ಧದಲ್ಲಿ ಈತನನ್ನು ಸೋಲಿಸಿ ಈತನ ರಾಜಧಾನಿಯ ಮುಖ್ಯ ಬಂದರಾದ ಭಟ್ಕಳ ಬಂದರನ್ನು ಸುಟ್ಟು ಹಾಕಿದರು. ಈತನ ಪತ್ನಿಯೇ ಚಿನ್ನಾದೇವಿ. ಚಿನ್ನಾದೇವಿಯ ಸಹೋದರಿಯೇ ಚನ್ನಭೈರಾದೇವಿ. ಪೋರ್ಚುಗೀಸರ ನಡುವಿನ ಒಪ್ಪಂದದಂತೆ ಸರಿಯಾಗಿ ಕಪ್ಪವನ್ನು ಕೊಡಲಿಲ್ಲ ಎಂದು ಕಾರ್ಟೇಜ್ ಪಡೆಯಿಂದ ಮಹಮ್ಮದೀಯರ ಹಡಗುಗಳಿಗೆ ಭಟ್ಕಳ ಬಂದರಿನಲ್ಲಿ ಚಿನ್ನಾದೇವಿಯು ಆಶ್ರಯ ಕೊಟ್ಟಳೆಂದು ಆರೋಪಿಸಿ ಪೋರ್ಚುಗೀಸನ ಖಪ್ತಾನ, ಅಲ್ಪೇನ್ಸೊ ಡಿಸೋಜ, ಭಟ್ಕಳವನ್ನು ಮುತ್ತಿಗೆ ಹಾಕಿ ರಾಣಿಯನ್ನು ಸೋಲಿಸಿ ಬಂದರನ್ನು ಸುಟ್ಟು ಹಾಕಿದ. ದೇವರಾಯನ ಸೋಲಿನಿಂದ ನಗರೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಚನ್ನಭೈರಾದೇವಿ ಪೋರ್ಚುಗೀಸರನ್ನು ಸೋಲಿಸಿ ತಂಗಿಯ ಆಡಳಿತದಲ್ಲಿದ್ದ ಹಾಡೊಳ್ಳಿಯನ್ನು ಮನೆತನದ ಗೌರವದ ಹಿನ್ನೆಲೆಯಲ್ಲಿ ತನ್ನ ಕೈಗೆ ತೆಗೆದುಕೊಂಡಳು ಎನ್ನುವುದು ಗಮನಾರ್ಹ ಸಂಗತಿಯಾಗಿದೆ.

ಕೆಲವು ಶಾಸನಗಳು ಮತ್ತು ಕೆಲವರ ಬರಹಗಳು ಚಿನ್ನಾಭೈರಾದೇವಿ ಮತ್ತು ಚಿನ್ನಾದೇವಿ ಒಬ್ಬಳೇ ಎಂದರೆ ಅಂಕೋಲೆಯ ಶ್ರೀ ಶ್ಯಾಮಸುಂದರ ಗೌಡ ಅವರು ಗೇರುಸೊಪ್ಪೆಯನ್ನು ಆಳಿದ ರಾಣಿ ಚನ್ನಾಭೈರಾದೇವಿ ಆದರೆ ಹಾಡೊಳ್ಳಿಯನ್ನು ಆಳಿದವಳು ಚಿನ್ನಾದೇವಿಯೆಂದು ಶಾಸನಗಳ ಹಿನ್ನೆಲೆಯಲ್ಲಿ ದಾಖಲಿಸಿದ್ದಾರೆ. ಈ ಭಿನ್ನ ವಿಚಾರಗಳಿದ್ದರೂ ಸಹಿತ ಪೋರ್ಚುಗೀಸರ ಮೂಲ ಕರಿಮೆಣಸಿನ ರಾಣಿ ಎನಿಸಿಕೊಂಡ ಚನ್ನಾಭೈರಾದೇವಿಯು ಸುದೀರ್ಘ ಸಮರ್ಥ ಆಡಳಿತ ನಡೆಸಿರುವುದು ಗಮನಾರ್ಹವಾಗಿದೆ. ಈ ಚನ್ನಭೈರಾದೇವಿ ಮತ್ತು ಚಿನ್ನಾದೇವಿಯ ಗಂಡನಾದ ಇಮ್ಮಡಿ ದೇವರಾಯನ ನಡುವಿನ ಒಂದು ಘಟನೆ ವಿಜಯನಗರ ಅರಸರಿಂದ ದೇವರಾಯ ಅಂಚಿಗೆ ಸರಿದು ಚನ್ನಬೈರಾದೇವಿ ರಾಣಿಯಾಗಿರುವುದು ಕುತೂಹಲಕರವಾಗಿದೆ. ಇದರ ಚಾರಿತ್ರಿಕ ವಿವರಗಳೆನೆಂದರೆ, ವಿಜಯನಗರದ ಅರಸ ಸದಾಶಿವರಾಯ ತನ್ನ ಸಾಮಾಜ್ಯದ ಬಲವರ್ಧನೆಗೆ ಪರ್ಷಿಯಾದಿಂದ ಸಾವಿರ ಕುದುರೆಗಳನ್ನು ತರಲು ಅಲ್ಲಿನ ದೊರೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದನು. ಸಮಗ್ರವಾಗಿ ಒಟ್ಟು ಕುದುರೆಗಳನ್ನು ಸಾಮ್ರಾಜ್ಯಕ್ಕೆ ತರುವುದರ ಬದಲಾಗಿ ರಾಜತಾಂತ್ರಿಕ ಜಾಣ್ಮೆಯನ್ನು ಬಳಸಿ ಮೊದಲ 500 ಕುದುರೆಗಳನ್ನು ಭಟ್ಕಳಕ್ಕೂ ಉಳಿದ 500 ಕುದುರೆಗಳನ್ನು ಎರಡು ತಿಂಗಳು ತರುವಾಯ ಹೊನ್ನಾವರಕ್ಕೆ ತಲುಪಿಸಲು ಕೋರಿದ್ದ. ಪೋರ್ಚುಗೀಸ್ ಮತ್ತು ಬಹುಮನಿ ಸುಲ್ತಾನರ ಕುತಂತ್ರದ ಹಿನ್ನೆಲೆಯಲ್ಲಿ ಭಟ್ಕಳದ ಬಂದರಿಗೆ ಬಂದಿಳಿದ ಕುದುರೆಗಳನ್ನು ಸುರಕ್ಷಿತವಾಗಿ ಹಂಪೆಗೆ ತಲುಪಿಸಲು ದೇವರಾಯನಿಗೂ ಮತ್ತು ಹೊನ್ನಾವರದ ಬಂದರಿಗೆ ಬಂದಿಳಿದ ಕುದುರೆಗಳನ್ನು ಚನ್ನಭೈರಾದೇವಿಗೆ ನೀಡಲಾಗಿತ್ತು. ಈ ಸಂದರ್ಭದಲ್ಲಿ ಚನ್ನಭೈರಾದೇವಿಯು ಹೊನ್ನಾವರಕ್ಕೆ ಬಂದಿಳಿದ 500 ಕುದುರೆಗಳನ್ನು ಸಮರ್ಥವಾಗಿ ವಿಜಯನಗರಕ್ಕೆ ತಲುಪಿಸಿದಳು. ಆದರೆ ದೇವರಾಯ

ತೆಗೆದುಕೊಂಡು ಹೋದ ಕುದುರೆಗಳು ಮಾರ್ಗ ಮಧ್ಯೆದಲ್ಲಿ ಬಹಮನಿ ಸುಲ್ತಾನರ ಪಾಲಾಗಿದ್ದವು. ಇದರಿಂದ ದೇವರಾಯನ ದುರ್ಬಲತೆಯನ್ನು ಅರಿತು ವಿಜಯನಗರದ ಅರಸರು ಚನ್ನಭೈರಾದೇವಿಗೆ ಗೇರುಸೊಪ್ಪೆಯ ರಾಣಿಯನ್ನಾಗಿ ನೇಮಕ ಮಾಡಿದರೆಂಬ ಪ್ರತೀತಿ ಇದೆ.

ಈ ತರಹದ ಭಿನ್ನ ಅಭಿಪ್ರಾಯಗಳಿದ್ದರೂ ಸಹಿತ 1552 ರಲ್ಲಿ ರಾಣಿ ಚನ್ನಭೈರಾದೇವಿ, ಹೊನ್ನಾವರ, ಭಟ್ಕಳ, ಕುಮಟಾ ಕಾರವಾರದ ಕಡಲ ಕಿನಾರೆಯ ಪ್ರದೇಶಗಳನ್ನು ಮತ್ತು ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಸಮರ್ಥವಾಗಿ ಆಡಳಿತ ನಡೆಸಿದ್ದಾಳೆ. ಇದಕ್ಕೆ ಅವಳ ಬಾಲ್ಯವೇ ಕಾರಣ. ಏಕೆಂದರೆ 1536 ರಲ್ಲಿ ಜನಿಸಿದ ಈಕೆ ಸಮರ ವಿದ್ಯೆಯ ಕಲಿಕೆಗಾಗಿ 16ನೇ ವಯಸ್ಸಿನಿಂದ 18 ನೇ ವಯಸ್ಸಿನವರೆಗೆ ಕಾರ್ಕಳ ಹಾಗೂ ಕೇರಳಗಳಲ್ಲಿ ಕಳೆದಳು. ರಾಣಿಯಾಗುವ ಮೊದಲು ಸಮರ ಕಲೆಯಲ್ಲಿ ಪಾರಂಗತರಾಗಿರಬೇಕೆಂಬ ಅರಿವು ಅವಳ ತಾಯಿಗಿತ್ತು. ಹೀಗಾಗಿ ಅವಳಿಗೆ ತಾಯಿಯ ಬಂಧುಗಳಾಗಿದ್ದ ಕಾರ್ಕಳದ ನಾಲ್ವಡಿ ಪಾಂಡ್ಯ ದೊರೆಯ ಉಸ್ತುವಾರಿಯಲ್ಲಿ ಸಮರಭ್ಯಾಸ ಕಲಿಸಿದ್ದಳು. ಮುಂದುವರೆದು ಕೇರಳದ ಕಲ್ಲಿಕೋಟೆಯಲ್ಲಿ ಇತರ ಶೌರ್ಯ ಮತ್ತು ಸಾಹಸ ವಿದ್ಯೆಗಳನ್ನು ಕಲಿತುಕೊಂಡಳು. ದಕ್ಷಿಣದ ಗೋವೆಯಿಂದ ಉತ್ತರ ಕನ್ನಡ, ಹೊನ್ನಾವರ, ಭಟ್ಕಳ ಮಿರ್ಜನ್, ಅಂಕೋಲಾ, ಬೈಂದೂರ ಮತ್ತು ದಕ್ಷಿಣ ಕನ್ನಡದ ಮಲ್ಪೆ ಪ್ರದೇಶಗಳು ಇವಳ ಆಳ್ವಿಕೆಗೆ ಒಳಪಟ್ಟವು ಇದರ ಜೊತೆಗೆ ಪಶ್ಚಿಮ ಘಟ್ಟದ ಮೇಲಿನ ಭಾರಂಗಿ, ಮೇನಬೀಡು ಕರುರು, ಹನ್ನಾರ, ಬದನೂರು, ಸವಳನಾಳ, ಅಮೀನಹಳ್ಳಿ ಸೀಮೆಗಳು ಚನ್ನಭೈರಾದೇವಿಯ ಆಡಳಿತಕ್ಕೆ ಒಳಪಟ್ಟಿದ್ದವು.

ಕರ್ನಾಟಕವನ್ನಾಳಿದ ರಾಣಿಯರ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಯಾವ ರಾಣಿಯು ರಾಜನಂತೆ ಸಾಮ್ರಾಜ್ಯಶಾಹಿ ಧೋರಣೆಯನ್ನು ಮತ್ತು ಭೋಗಲಾಲಸೆಗೆ ಒಳಗಾದ ದಾಖಲೆಗಳಿಲ್ಲ. ರಾಜ ಬದುಕಿರುವಾಗ, ಅಕಾಲಿಕ ಮರಣ ಹೊಂದಿದಾಗ, ದುರ್ಬಲಗೊಂಡಾಗ ಒಳಸಂಚಿಗೆ ಅಥವಾ ಒತ್ತಡಗಳಿಗೆ ಒಳಗಾದಾಗ ರಾಣಿಯರು ಶಕ್ತಿ ರೂಪವಾಗಿ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡು ಪರಂಪರೆ ಮತ್ತು ಮನೆತನದ ಸಿಂಹಾಸನದ ಗೌರವವನ್ನು ಕಾಪಾಡಿದ್ದಾರೆ. ಯಾವ ರಾಣಿಗೂ ಯುದ್ಧದ ಅನಿವಾರ್ಯವಿರಲಿಲ್ಲ ಅನಿವಾರ್ಯವಾದಾಗ ರಣರಂಗವನ್ನು ಪ್ರವೇಶಿಸಿದ್ದಾರೆ. ಇದರಂತೆ ರಾಣಿ ಚನ್ನಭೈರಾದೇವಿ ಮಾತೃಮೂಲ ಕುಟುಂಬದ ಅಥವಾ ಅಳಿಯ ಕಟ್ಟಿನಿಂದ ಬಂದ ಕಾರಣ ತಾನಾಗಿಯೇ ಒಂದೇ ಒಂದು ಯುದ್ಧವನ್ನು ಘೋಷಿಸದೆ ತನ್ನ ಸಾಮ್ರಾಜ್ಯದ ಮೇಲೆ ದಾಳಿಯಾದಾಗ ವೀರಾವೇಶದಿಂದ ಹೋರಾಡಿ ವೈರಿಗಳ ಹುಟ್ಟಡಗಿಸಿದ್ದಾಳೆ. ಇವಳ ಸಮಗ್ರ ಚರಿತ್ರೆಯ ಅರಿವು ನಮಗಾಗುವ ಜೊತೆಯಲ್ಲಿ ಪ್ರಾಥಮಿಕ ಅಥವಾ ಪ್ರೌಢ ಶಾಲೆಗಳಲ್ಲಿ ಇವಳ ಚರಿತ್ರೆಯನ್ನು ಬಾಲಕಿ ಬಾಲಕಿಯರು ಅಧ್ಯಯನ ಮಾಡಿದಾಗ ನಿಜವಾದ ಚನ್ನಾಭೈರದೇವಿಗೆ ನಾವು ಗೌರವ ಸಲ್ಲಿಸಿದಂತಾಗುತ್ತದೆ.

ಈಕೆಯ ಆಡಳಿತದಲ್ಲಿ ಉತ್ತರ ಕ್ನನಡ ಜಿಲ್ಲೆಯ ಸೌಂದರ್ಯವನ್ನು ಹೆಚ್ಚಿಸಿದ ಗೇರುಸೊಪ್ಪೆಯ ಚತುರ್ಮುಖ ಬಸದಿ, ಕಾರ್ಕಳದ ಜೈನ ಬಸದಿಗಳು ಇವಳ ಕಾಲದಲ್ಲಿ ನಿರ್ಮಾಣವಾದವುಗಳೆಂದರೆ ಹೆಮ್ಮೆ ಎನಿಸುತ್ತದೆ. ಪೋರ್ಚುಗೀಸರ ದಾಳಿಯಿಂದ ಗೋವೆಯಿಂದ ವಲಸೆ ಬಂದ ಸಾರಸ್ವತ ಬ್ರಾಹ್ಮಣರಿಗೆ, ಕೊಂಕಣಿಯರಿಗೆ, ಕಾರ್ವಿಗಳಿಗೆ ಮತ್ತು ನಾಡವರಿಗೆ ಆಶ್ರಯ ನೀಡಿ ಮಾನವೀಯತೆ ಮೆರೆದವಳು. ಈ ಕುರಿತು ಗೋಪಾಲಕೃಷ್ಣ ಪೈ ಅವರ 'ಸ್ವಪ್ನ ಸಾರಸ್ತವ' ಕೃತಿ ಗಮನಾರ್ಹವಾಗಿದೆ. ಕಾಡಲ್ಲಿ ಬೆಳೆಯುವ ಕಾಳುಮೆಣಸನ್ನು ದೂರದ ದೇಶಗಳಿಗೆ ಮಾರಾಟ ಮಾಡಿ ಅದೇ ಮೌಲ್ಯದ ಬೆಳ್ಳಿಯನ್ನು ಪಡೆಯುತ್ತಿದ್ದಳು.

ಅವಳ ಸಂದರ್ಭದಲ್ಲಿನ ಮೆಣಸಿನಬಾವಿ, ಹಡಗಿನ ಬಾಗಿಲು, ಹಡಿನಬಾಳ, ಜ್ವಲಾಮಾಲಿನಿ ದೇವಾಲಯ ಕಂಡೋಡಿ, ಕುಂಟೋಡಿ, ಬ್ಯಾಗೋಡಿ ಊರುಗಳು ಬಂಗಾರಮಕ್ಕಿ ಮತ್ತು ಬೆಳ್ಳಿಮಕ್ಕಿ ಅಂತಹ ದೈವಕೇಂದ್ರಗಳು ನಗರೆಯ ಪರಿಸರಿದಲ್ಲಿರುವ ಜೋಡಿ ಭಾಗಗಳು ಇವೆಲ್ಲವುಗಳು ಚನ್ನಭೈರಾದೇವಿಯ ಸಾಂಸ್ಕೃತಿಕ ಕುರುಹುಗಳಾಗಿವೆ. ತನ್ನ ಪ್ರಜಾಪ್ರಿಯ ಆಡಳಿತ ಮತ್ತು ಔದಾರ್ಯದಿಂದ ನೆಲ ಮತ್ತು ಪರಂಪರೆಗೆ ಧಕ್ಕೆ ಬಂದಾಗ ಬಲಿಷ್ಠರಾದ ಪೋರ್ಚುಗೀಸರನ್ನು ಸೆದೆಬಡಿದು ಬ್ರಿಟಿಷರಿಗೆ ಭಯದ ಎಚ್ಚರ ನೀಡಿದ ವ್ಯಕ್ತಿತ್ವ ಇವಳದು. ಇವತ್ತು ಕರಾವಳಿ ಪ್ರದೇಶದಲ್ಲಿ ಬೆಳೆಯುವ ಯಥೇಚ್ಚವಾದ ಕಾಳು ಮೆಣಸು ಮತ್ತು ವೀಳ್ಯದೆಲೆಯ ಹಿಂದೆ ರಾಣಿಯ ಸಾಂಸ್ಕೃತಿಕ ಚರಿತೆಯಿದೆ. ಹೀಗಾಗಿ 'ಕಾಳುಮೆಣಸಿನ ರಾಣಿ', 'ಕರಿಮೆಣಸಿನ ರಾಣಿ', 'ಪೆಪ್ಪರ ಕ್ವೀನ್', 'ಔಅರಸಿ' ಇತ್ಯಾದಿ ಬಿರುದುಗಳನ್ನು ಪ್ರಜೆಗಳಿಂದಲೇ ಪಡೆದ ಅಪ್ರತಿಮ ರಾಣಿ ಚನ್ನಭೈರಾದೇವಿಯಾಗಿದ್ದಾಳೆ

ಶರಾವತಿಯ ಎರಡು ದಡಗಳಲ್ಲಿರುವ ನಗರೆ ಮತ್ತು ಗೇರುಸೊಪ್ಪ ರಾಣಿಯ ನಿರ್ದಿಷ್ಟ ಆಡಳಿತ ಪ್ರದೇಶಗಳು. ಈ ಪ್ರದೇಶ ಕನ್ನಡ ನಾಡಿಗೆ ಎಲ್ಲವನ್ನೂ ನೀಡಿದೆ. ಕರ್ನಾಟಕಕ್ಕೆ ಅವಶ್ಯವಿರುವ ಶೇ 60 ರಷ್ಟು ವಿದ್ಯುತ್‌ನ್ನು ಶರಾವತಿಯ ನೀರು ಧಾರೆಯೆರೆದಿದೆ. ಎಲ್ಲವನ್ನು ಕೊಟ್ಟ ಈ ಪ್ರದೇಶಕ್ಕೆ ನಾಡ ದೊರೆಗಳು ಕೊಟ್ಟಿರುವುದು ಕತ್ತಲೆಯ ಚರಿತ್ರೆಯಾಗಿದೆ. ಇತ್ತೀಚೆಗೆ ಧರ್ಮಸ್ಥಳದ ವಿರೇಂದ್ರ ಹೆಗ್ಗಡೆಯವರು ಚನ್ನಭೈರಾದೇವಿಯ ಹೆಸರಲ್ಲಿ ಥೀಮ್‌ಪಾರ್ಕ ಮಾಡಲು ಹೊರಟಿರುವುದು ಒಂದಿಷ್ಟು ನಿಟ್ಟುಸಿರು ಬಿಡುವಂತಾಗಿದೆ. ಇವುಗಳೇನೇ ಇದ್ದರೂ ದೇಶ ವಿದೇಶಗಳಲ್ಲಿರುವ ಚನ್ನಭೈರಾದೇವಿಯ ಕುರಿತಿರುವ ದಾಖಲೆಗಳನ್ನು ಸಂಗ್ರಹಿಸಿ ಚದುರಿ ಮರೆತು ಹೋದ ಅವಳ ಚರಿತ್ರೆಯನ್ನ ಸಮಗ್ರವಾಗಿ ಕಟ್ಟಿಕೊಟ್ಟು ನಾಡಿಗೆಲ್ಲ ಅವಳ ಚರಿತ್ರೆಯ ಸಾರವನ್ನು ತಿಳಿಸುವ ಚನ್ನಭೈರಾದೇವಿಯನ್ನ ನಿಜವಾಗಿ ನಾವು ಗೌರವಿಸಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಹೊನ್ನಾವರ ತಾಲೂಕಿನ ಸಾಮ್ರಾಜ್ಞೆಯಾಗಿರುವ ಚನ್ನಭೈರಾದೇವಿಯ ಕುರಿತಿರುವ ಒಂದು ವ್ಯಕ್ತಿ ಚಿತ್ರಣವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಇದು ಅಪೂರ್ಣ ಎಂಬ ಎಚ್ಚರದಲ್ಲಿಯೇ ಚನ್ನಭೈರಾದೇವಿಯನ್ನು ಪೂರ್ಣವಾಗಿ ಗ್ರಹಿಸಿಕೊಳ್ಳುತ್ತಾ ಪರಿಪೂರ್ಣತೆ ಎಡೆಗೆ ಸಾಗುತ್ತಿದ್ದೇವೆ. ಮೇಲೆ ಪ್ರಸ್ತಾಪಿಸಿದ ಮತ್ತು ನಿರೂಪಿಸಿದ ವಿಷಯಗಳು ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ಬಂದರೆ 'ಹೊನ್ನನಾಗರ' 'ಹೊನ್ನನಗರಿ'ನ ಹೊನ್ನಾವರದ ನಗೆರೆಯಲ್ಲಿ ಸದಾ ಚನ್ನಭೈರಾದೇವಿ ಜನಮಾನಸದಲ್ಲಿ ನಗುತ್ತಾ ಇರುವಂತೆ ಆಗಬಹುದು.

**ಆಕರ ಗ್ರಂಥಗಳು**


- ಗಜಾನನ ಶರ್ಮ. (2021). ಚೆನ್ನ ಭೈರಾದೇವಿ. ಅಂಕಿತ ಮಸ್ತಕ.
- ಭಾರತದ ಕಾಳುಮೆಣಸಿನ ರಾಣಿ ಚೆನ್ನ ಭೈರಾದೇವಿ. https://www.jainheritagecentres.com
- ಅಜಿತ್ ಹರೀಶಿ. *ಐತಿಹಾಸಿಕ ಮಹತ್ವದ ಕಾದಂಬರಿ 'ಚೆನ್ನಭೈರಾದೇವಿ'.* *https://www.bookbrahma.com/news/aitihasika-mahatvada-kadambari-chennabhairadevi*